# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 15-03-2021 ಪ್ರಶ್ನೆ ಸಂಖ್ಯೆ : 952 (1282)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 15-03-2021

ಉತ್ತರಿಸುವ ಸಚಿವರು: ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ವಿಷಯ : `ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ' ಯೋಜನೆಯ ಬಗ್ಗೆ

(ಅ) `ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ' ಯೋಜನೆಯ ಸಂಪೂರ್ಣ ವಿವರಗಳೇನು; (ಆದೇಶ ಪ್ರತಿ ಸಲ್ಲಿಸುವುದು)

(ಆ) ಈ ಯೋಜನೆಯಲ್ಲಿ ರಾಜ್ಯದ ಯಾವ ಯಾವ ಆಸ್ಪತ್ರೆಗಳು ಯಾವ ಯಾವ ಕಾಯಿಲೆಗಳಿಗೆ ಚಿಕಿತ್ಸೆ ಒದಗಿಸುತ್ತಿವೆ; ಈ ಯೋಜನೆಯಲ್ಲಿ ಆಸ್ಪತ್ರೆಗಳನ್ನು ಒಳಪಡಿಸಬೇಕಾದಲ್ಲಿ ಅದಕ್ಕಿರುವ ಮಾನದಂಡಗಳು ಯಾವುವು; ಈ ಯೋಜನೆಯು ಯಾವಾಗ ಆರಂಭವಾಗಿದೆ; ಅದು ಪ್ರಸ್ತುತ ಕಾರ್ಯರೂಪದಲ್ಲಿದೆಯೇ;

(ಇ) ದಿನಾಂಕ: 01-01-2019ರಿಂದ ದಿನಾಂಕ:28-02-2021ರವರೆಗೆ ನಾಗಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಗುರುತಿನ ಕಾರ್ಡುಗಳನ್ನು ಪಡೆದುಕೊಂಡಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ಹೆಸರು ಮತ್ತು ವಿಳಾಸಗಳನ್ನು ಹಾಗೂ ಗ್ರಾಮವಾರು, ಹೋಬಳಿವಾರು, ತಿಂಗಳುವಾರು ಮಾಹಿತಿಯನ್ನು ನೀಡುವುದು)

(ಈ) ಗ್ರಾಮೀಣ ಪ್ರದೇಶದಲ್ಲಿರುವ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?